Regd No. M 1299 SATYAVADI Founded1917

ಸತ್ಯವಾದಿ

(ಅರಮನೆ ಸಿರಸ್ತೇದಾರ್ ಎಂ. ವಿ. ಸುಬ್ಬರಾಯರಿಂದ ಸ್ಥಾಪಿಸಲ್ಪಟ್ಟುದು)

ಸಂಪುಟ 31 ಸಂಚಿಕೆ 47 | ಗುರುವಾರ 27—11—47 | ಬಿಡಿ ಪ್ರತಿ 3 ಸೈ

ದೇವರ ದೃಷ್ಟಿಯಲ್ಲಿ ಎಲ್ಲರೂ ಒಂದೆ

ಹಿಂದೂ ದೇವಸ್ಥಾನ ಒಂದರಲ್ಲಿ ಪೂಜೆ ನಡೆದಿತ್ತು. ಪೂಜೆಯ ಮಧ್ಯದಲ್ಲಿ ಗ್ರಾಮದ ಸಭ್ಯರೊಬ್ಬರು ಬಂದರು. ಅವರನ್ನು ಮರ್ಯಾದೆ ಪೂರ್ವಕ ದೇವರ ವಿಗ್ರಹದ ಹತ್ತಿರದ ಆಸನ ಒಂದರಲ್ಲಿ ಕೂರಿಸಿದರು. ನನಗೆ ಆಶ್ಚರ್ಯವಾಯಿತು. ಆತನ ದುಡ್ಡಿಗೆ ಬೆಲೆಯೋ ಯಾ ಆತನ ಸದ್ಗುಣಕ್ಕೆ ಸ್ಥಾನವೇ ಎಂದು ವಿಚಾರಿಸಲು ಗ್ರಾಮದ ಧನಿಕರನ್ನ ರೆಂದು ತಿಳಿಯಬಂದಿತು.

ವಸೀದಿಯೊಂದರಲ್ಲಿ ದನಮಾಜು ನಡೆಯುತ್ತಿತ್ತು. ಶ್ರೀಮಂತ ಪ್ಲಾಂಟರೊಬ್ಬರು ಬಂದರು. ಅವರು ಮುಂದೆ ದುಗ್ಗಿ ಪ್ರಥಮ ಸ್ಥಾನವನ್ನಾಕ್ರಮಿಸಲಿಲ್ಲ. ಕಿಕ್ಕಿರಿದು ತುಂಬಿದ್ದ ಇತರ ಮುಸ್ಲಿಮರ ಹಿಂದೆ ತಾವೂ ಮಂಡಿಸಿದರು. ನಮ್ಮ ನೆರೆ ಊರಿನ ಮುಸ್ಲಿಮರಿಗೆಲ್ಲಾ ಇವರು ಹುಂದಾಳು. ಜೊತೆಗೆ ಧನವಂತರು. ಇವರನ್ನೇಕೆ ಮುಸಲ್ಮಾನರು ಆದರಿಸಿ ಮುಂದೆ ಕೂರಿಸಲಿಲ್ಲ? 'ಖುದಾಕೆ ಘರ್ ಮೆ ಸಬ್ ಏಕ್‌ಹೈಂ' ದೇವರ ಮನೆಯಲ್ಲಿ ಎಲ್ಲರೂ ಸೆನಾನರು ಎಂದುತ್ತರ ಬಂತು

ದೇವರು ತೋಳಿನ ಬಲವನ್ನಾಗಲೀ ಜೇಬಿನ ತೂಕವನ್ನಾಗಲೀ ಬ್ಯಾಂಕಿನ ಲೆಕ್ಕವನ್ನಾಗಲೀ ನೋಡುವನಲ್ಲ. ಆತನು ನೋಡುವುದು ಹೃದಯದ ಬಳವನ್ನು, ಅಲ್ಲವೇ? (ಕೂ)

ಹಳ್ಳಿ ಮುಳುಗಿಹೋಯ್ತು

ನೇಪಾಳದಲ್ಲಿ ಬಂದು ನದಿಗೆ ವಿಪರೀತ ಪ್ರವಾಹ ಬಂದು 'ಧೌ' ಎಂಬ ಹಳ್ಳಿ ನೀರಿನಲ್ಲಿ ಮುಳುಗಿಹೋಯ್ತು.

ವುಡ್ ಲ್ಯಾಂಡ್ಸ್

28—11—47 ರಿಂದ

ಮಾಯಾದೇವಿ

ರಮೇಶ್

ಡಬ್ಲ್ಯೂ. ಎಂ. ಖಾನ್

ಅನ್ವರ್

— ಪಾತ್ರವಹಿಸಿರುವ —

ರಾನ್ತ

(ಅಮೋಘ ಹಿಂದಿ ಚಿತ್ರ)

ಪ್ರತಿ ದಿನ 3 ಆಟಗಳು

ಹೈದರಾಬಾದಿನಿಂದ 100 ಕೋಟಿ

ರೂಸಾಯಿ ಹೊರಕ್ಕೆ ಹಾರಿದೆಯಂತೆ !

100 ಕೋಟಿ

ಬೊಂಬಾಯಿ ನ 25 .... ಹೈದರಾಬಾದು ಕಾಂಗ್ರೆಸ್ ಪ್ರಕಟಣಾಧಿಕಾರಿ ಪ್ರಕಟಿಸಿರುವ ಬುಲ್ಟಿನ್ನಿನಲ್ಲಿ ಸುಮಾರು 100 ಕೋಟಿ ರೂ. ಹೈದರಾಬಾದಿಂದ ಹೊರಕ್ಕೆ ಹಾರಿಸಲಾಗಿದೆಯೆಂದೂ, 15 ಸಾವಿರ ಮಂದಿ ಮುಸ್ಲಿಮೇತರರು ಜೋಳಾರಾಮಿಗೆ ಹೋಗಿರುವರೆಂದೂ ತಿಳಿಸಿರುವರು.

ಸ್ವತಂತ್ರ ನಗರ

ಭಾರತದಲ್ಲಿನ ಫ್ರೆಂಚು ಸ್ವಾಸ್ಥ್ಯಗಳಾದ ಪಾಂಡಿಚೆರಿ ಕರೈಕಲ್ ಮಾಹೆ ಯಾನಾಂ ಚಂದ್ರನಾಗೂರು 'ಸ್ವತಂತ್ರ ನಗರ' ಗಳಾಗಿ ಸಾಮಿಲ್ಪಟ್ಟಿವೆ.

ಕೆ.ದುರೆ ಜೂಜಿಲ್ಲ

ಡಾಕಾ ದ 24 .... ಪೂ. ಬಂಗಾಳಾದಲ್ಲಿ ಇನ್ನು ಮುಂದೆ ಕುದುರೆ ಜೂಜು ನಜಾಮಾಲಾಗುವುದೆಂದು ಹೇಳಲಾಗಿದೆ

ಮುಷ್ಕರ

ಮಧುರಾ ನ 26 .... ಹೋಟಲು ಕೆಲಸಗಾರರು 300 ಮಂದಿ ಮೇಷ್ಕರ ಹಿಡಿದಿರುವರು

ಆಹಾರ ಬರುತ್ತೆ

ನವದೆಹಲಿ ನ 25 .... ದಿನಕ್ಕೆ 2 ಹಡಗುಗಳಂತೆ ಡಿಸೆಂಬರು 20 ರೊಳಗೆ ಭಾರತಕ್ಕೆ 347500 ಆಹಾರ ಧಾನ್ಯ ಬುದು ಬೇಳುವುದು.

ಭಾರತದ ಬಜೆಟ್

ಸ್ವತಂತ್ರ ಭಾರತದ ಪ್ರಥಮ ಬಜೆಟ್ಟನ್ನಲ್ಲಿ 26-24 ಕೋಟಿ ರೂ. ಖೋತಾ ಕಂಡುಬಂದಿದೆ.

ಪಾಕಿಶ್ತಾನ್ ಧ್ವಜ

ಕಾಕಿಸ್ತಾನದ ಧ್ವಜವನ್ನು ಭಾರತ ರಾಷ್ಟ್ರದಲ್ಲೆಲ್ಲೂ ಹಾರಿಸಲಿಲ್ಲಾಗದೆಂದು ಡಾ|| ಸುಬ್ಬರಾಯಸ್ಟರು ಮದರಾಸು ಶಾಸನ ಸಭೆಯಲ್ಲಿ ತಿಳಿಸಿದರು

ಕಲ್ಲು ಸಿಡಿತ

ಬೆಂಗಳೂರು ನ 25 .... ಕೋಲ್ಲಾರದ ಚಿನ್ನದ ಗಣಿಯಲ್ಲಿ ಬೆಂಡೆ ಪಿಡಿದು 10 ಮಂದಿ ಸತ್ತರೆಂದು ಹೇಳಲಾಗಿದೆ.

ಮಹಾ ಮುಷ್ಕರ

ಪ್ಯಾರಿಸ್ ನ 26.... 1250 ಸಾವಿರ ವಂದಿ ಕೆಲಸಗಾರರು ಮುಷ್ಕರ ಹಿಡಿದಿದ್ದಾರೆ

ವಸ್ತ್ರಾಸದನ

ಮೈಸೂರು ಜಯನಗರದಲ್ಲಿರುವ ವಸ್ತ್ರಾಸದನದ ವಿಶೇಷ ಸಮಾರಂಭವು ಈವತ್ತಿನಿಂದ ತಾ || 30 ರವರೆಗೆ ನಡೆಯುವುದು.

ಉಪವಾಸ

ಮದರಾಸು ಸರಕಾರಿ ಭವನದ ಮುಂದೆ ಶಾಸನ ಸಭಾ ಮೆಂಬರು ಶ್ರೀ ಕುವ್ವ ಸ್ವಾಮಿಯವರು ಉಪವಾಸ ಹೂಡಿದ್ದಾರೆ. ಅಕ್ಕೊಟ್ಟರಿಂದ ಮುಚ್ಚಲ್ಪಟ್ಟಿರುವ ಜಯಲಕ್ಷ್ಮೀ ಮತ್ತು ಕನುಅರಗಿಂಗೆಗಳು ತೆರೆಯುವವರೆಸೂ ಉಪವಾಸ ನಡೆಸುವರಂತೆ

ಮೈಸೂರು .... ಮೈಸೂರು ಡಿ || ಸಂತೆಗಳಲ್ಲಿ ಹೆಂಡ ಮತ್ತು ಇತರ ಮಾದಕ ಪದಾರ್ಥಗಳನ್ನು ಮಾರಕೂಡದೆಂದು ಪೈಸಹೆಂಟರು ಅಜ್ಞೆ ಮಾಡಿದಾರೆ.

ಬೆಂಗಳೂರು.... ಭಾರತ ಸರಕಾರವು ಸಂಸ್ಥಾನಕ್ಕೆ ನವೆಂಬರು ತಿಂಗಳಲ್ಲಿ 1186 ಟೀಲು ಬಟ್ಟೆ ಹೆಚ್ಚಾಗಿ ನಿಗದಿ ಮಾಡಿದೆ

ಉಮೇದುವಾರಿಕೆ ಪತ್ರ

ಮೈಸೂರು ವಿದ್ಯಾರ್ಥಿ ಕಾಂಗ್ರೆಸ್ಸಿನ ನೂತನ ಕಾರ್ಯಕಾರೀ ಸಮಿತಿಯ ಅಧ್ಯಕ್ಷ, ಕಾರ್ಯದರ್ಶಿ ಮತ್ತು ಸದಸ್ಯ ಸ್ಥಾನಗಳಿಗೆ ಉಮೇದುವಾರರಾಗಿ ನಿಲ್ಲಲು ಅಪೇಕ್ಷೆಯುಳ್ಳವರು ತಮ್ಮ ಉಮೇದುವಾರಿಕಾ ಪತ್ರಗಳನ್ನು ಡಿಸೆಂಬರ್ 1 ನೇ ತಾರೀಖು ಸಂಜೆ 6 ಗಂಟೆಯೊಳಗೆ ಕಾರ್ಯಾಲಯಕ್ಕೆ ಕಳುಹಿಸಬೇಕಾಗಿ ಕಾರ್ಯದರ್ಶಿಗಳಾದ ಶ್ರೀ ಶಾಂತರಾಜ್‌ರವರು ತಿಳಿಸಿರುತ್ತಾರೆ.

ಂ ಂ

ಬಿ ಬಿ ಸಿ

ಬ್ರಿಟಿಷ್ ಬ್ರಾಡ್ ಕ್ಯಾಸ್ಟಿಂಗ್ ಕಾರ್ಪೊರೇಷನ್ ವಾರಂಪ್ರತಿ 5 ಸಾವಿರ ಗ್ರಾಮೊಫೋನು ರಿಕಾರ್ಡುಗಳನ್ನು ವಿವಿಧ ಪ್ರೋಗ್ರಾಮುಗಳಿಗಾಗಿ ಉಪಯೋಗಿಸುತ್ತಿದೆ

ಂ ಂ

ಭಾರಿ ಚಪ್ಪರದವರೆ

ಲಂಡನ್ ನಗರದಲ್ಲಿ ಒಂದು ಮನೆಯ ಹಿತ್ತಲಲ್ಲಿ 30 ಅಂಗುಲ ಉದ್ದ ಮದ್ದು ಷ್ಯನ ಮಣಿಕಟ್ಟಿನಷ್ಟು ದಪ್ಪವಿರುವ ಚಪ್ಪರದವರೇ ಕಾಯಿಗಳು ಬೆಳೆದಿವೆ

ಂ ಂ

ಭಂಗಾರದ ರಾಶಿ

1945 ರಲ್ಲಿ ನಾಜಿಗಳಿಂದ ಲೂಟಿ ಮಾಡಲ್ಪಟ್ಟಿದ್ದ 2125 ಸಾವಿರ ಪೌಂಡು ಗಳ ಭಂಗಾರವನ್ನು ಭಾರಿ ರಕ್ಷಣೆಗೊಳಗೂಡಿದ ರೈಲಿನಲ್ಲಿ ತರಲಾಯಿತು.

ಂ ಂ

ಅತ್ಯಾಚಾರಿಗೆ ಶಿಕ್ಷೆ

9 ವರ್ಷದ ಒಬ್ಬ ಹುಡುಗಿಯ ಮೇಲೆ ಅತ್ಯಾಚಾರ ನಡೆಸಿದೆ ದೊರೆಸ್ವಾಮಿ ಎಂಬುವನಿಗೆ ಮದರಾಸು ಹೈಕೋರ್ಟ್ ನವರಿಂದ 7 ವರ್ಷ ಸಜಾ ವಿಧಿಸಲಾಗಿದೆ.

ಂ ಂ

ಅವಿವಾಹಿತರ-ಸಂಘ

ಅಲಹಾಬಾದಿನಲ್ಲಿ ಸ್ಥಾಪಿತವಾಗಿರುವ ಅವಿವಾಹಿತ ಸಂಘದ ಸದಸ್ಯರು ತಮ್ಮ ಜೀವನ ಮಟ್ಟವನ್ನು ಬೆಳೆಸಿಕೊಳ್ಳುವವರೆಗೆ ಮದುವೆಯಾಗದಿರಬೇಕೆಂದು ನಿಯಮ.

ಂ ಂ

ಭಾರತವರ್ಷ

ಹಿಂದೂಸ್ಥಾನ ಒಕ್ಕೂಟಕ್ಕೆ 'ಭಾರತ ವರ್ಷ' ಎಂಬ ಹೆಸರನ್ನಿಡಬೇಕೆಂದು ಶ್ರೀ ಬಾಳಕೃಷ್ಣ ಶರ್ಮರು ಘಟನಾ ಸಮಿತಿಯಲ್ಲಿ ಒಂದು ಸೂಚನೆ ತರುವರೆಂದು ತಿಳಿಯಬಂದಿದೆ.

ತಕ್ಕರ ಬುದ್ಧಿ ಚಾತುರ್ಯ

ಕಲ್ಕತ್ತೆಯಲ್ಲಿ ಇಬ್ಬರು ಒಂದು ಕಾರಿನಲ್ಲಿ ಬಂದು ಒಬ್ಬ ಪೆಟ್ರೋಲು ವ್ಯಾಪಾರಿಯಲ್ಲಿ ಎರಡು ಗ್ಯಾಲನ್ ಪೆಟ್ರೋಲು ಕೇಳಿದರು. ಆವಕ್ಕೆ ಕೂಪನ್ ಕೇಳಲು ತಮ್ಮ ಗೈಕಿ ಒಬ್ಬನು ಹಿಂದಿನ ಅಂಗಡಿಯಲ್ಲಿ ಸಿಗರೇಟು ಕೊಳ್ಳುತ್ತಿದ್ದು ಅವನು ಬಂದೊಡನೆ ಕೂಪನ್ ಕೊಡುವುದಾಗಿ ಹೇಳಿದರು. ಅಷ್ಟರಲ್ಲಿ "ಪೆಟ್ರೋಲು ಕೊಡಬಹುದೆಂದು ಹೇಳಿದರು. ಪೆಟ್ರೋಲು ಪೂರೈಸುವಷ್ಟರಲ್ಲಿ ಒಬ್ಬ ಪೋಲೀಸು ಅಧಿಕಾರಿಯು ಬಂದು ಕೊಟ್ಟ ಪೆಟ್ರೋಲಿಗೆ ಕೂಪನ್ ಎಲ್ಲಿದೆ ತೋರಿಸೆಂದು ಕೇಳಿದನು. ಅದು ಇರಲಿಲ್ಲ. ಆಗ ಪೋಲೀಸು ಅಧಿಕಾರಿಯು 5 ಸಾವಿರ ರೂ ಕೇಳಿದನು. ಇಲ್ಲವಾದರೆ ಕೂಪನ್ ಇಲ್ಲದೆ ಕಳ್ಳಪೇಟೆಯಲ್ಲಿ ಪೆಟ್ರೋಲು ಮಾರಲಾಗುತ್ತಿದೆಂಬ ಆರೋಪವಿಟ್ಟು ಲೈಸನ್ಸು ರದ್ದುಮಾಡಲು ತಿಳಿಸುವುದಾಗಿ ಬೆದರಿಕೆ ಹಾಕಿದನು. ವ್ಯಾಪಾರಿಯು ಗಾಬರಿಗೊಂಡು ತನ್ನಲ್ಲಿದ್ದ 1500 ರೂ ಕೊಟ್ಟು ಕ್ಷಮಿಸಬೇಕೆಂದು ಬೇಡಿಕೊಂಡನು. ಆಗ ಆ ಹಣ ತೆಗೆದುಕೊಂಡು ಮೂವರೂ ಪರಾರಿಯಾದರು. ಒಳ್ಳೇ ತಕ್ಕರು ಅಲ್ಲಿವೇ ಇವರು. (ಲೋ)

ಂ ಂ

ಹರಿಜನೋದ್ಧಾರ

ಮದರಾಸು ಸರಕಾರದಲ್ಲಿ ಹರಿಜನರಿಗೆ ಹೆಚ್ಚು ಹುದ್ದೆಗಳನ್ನು ಕೊಡಲಾಗುವುದೆಂದು ತಿಳಿಯಬಂದಿದೆ

ನಿನ್ನೆ ಪತ್ರಿಕೆಯಲ್ಲಿ ಕಂಪಾಜಟರ ಅಜಾಗರೂಕತೆಯಿಂದ ಕೆಲವು ತಪ್ಪುಗಳು ಬಿದ್ದಿರುವುದಕ್ಕಾಗಿ ವಿಷಾದಿಸುತ್ತೇವೆ.

Woodlands

Morning Shows at 10-30
From 28—11—47 For 4 days

Atlantic Ferry

— starring —

Veleric Hobson
Michael Redgrave

Save the Cow

ಗೋ ವಧೆ ನಿಲ್ಲಲಿ

Edited, Printed and Publishd by M S Krishna Rao at the Satyavadi Press Chamaraja Agahar Myrsore.

Woodlands

ಯಶಸ್ವಿ 4 ನೇ ವಾರ

ಅಶೋಕಕುಮಾರ್

ವೀರಾ, ಪ್ಯಾರೊ, ಪಾತ್ರವಹಿಸಿರುವ

ಪಿ ಷಿಕಾರಿ ರಿ

(ಅವೋಘ ಹಿಂದಿ ಚಿತ್ರ)

At Opera From 20—11—47

ನೂಲಿತ — ಶಿವಭಾಗ್ಯಂ

ಎಸ್. ವಿ. ಸುಬ್ಬಯ್ಯ — ನಂಬಿಯಾರ್

ಪಾತ್ರವಹಿಸಿರುವ

ಕಂಜನ್

ತಮಿಳು ಚಿತ್ರ — ಇದರ ಜೊತೆಯಲ್ಲಿ ಕೊಯಮತ್ತೂರಿನಲ್ಲಿ ಸ್ವತಂತ್ರ ದಿನಾಚರಣೆ ಮತ್ತು ಮಹಾತ್ಮಾ ಗಾಂಧಿಯ ವರಸಳನಿ ಯಾತ್ರೆ ಫಿಲಿಂ ಸಹಾ ತೋರಿಸಲಾಗುತ್ತೆ.

SHAKTI SUDHA

A Superb TONIC

ಸತ್ಯವಾದಿ

ದಿನಪತ್ರಿಕೆ. ತಿಂಗಳಿಗೆ ಆರಾಣೆ

ವಾರ್ಷಿಕ ಚಂದ ಪೂರ್ತಿಳಕ್ಕೆ

ಅಂಚೆವೆಚ್ಚ ಸೇರಿ ರೂ. 9.

ಸೋಮವಾರಸಂಚಿಕೆ ವಾರ್ಷಿಕಚಂದಾ

ಪರಸ್ಥಳಕ್ಕೆ ಅಂಚೆವೆಚ್ಚ ಸೇರಿ 1-12-0

ಟ್ರೇಡ್ ಯೂನಿಯನ್ ಕಾಂಗ್ರೆಸ್ಸಿನ ನೂತನ ಅಧ್ಯಕ್ಷರು

ಶ್ರೀ 'ಓಂ' ಗುರುತಿನ

ಅರಿಸಿದ ಪರಿಶುದ್ಧ ಕೇಸರಿ

ಈ ಶ್ರೀ ಓಂ ಗುರುತಿನ ಕೇಸರಿಯು ಗ್ಯಾರಂಟಿಯಾಗಿ ಪರಿಶುದ್ಧವಾದುದು. ಸ್ಪೇನ್ ದೇಶದಲ್ಲಿಯೆ ಕೇಸರಿ ಗಿಡಗಳಿಂದ ಅರಿಸಲ್ಪಟ್ಟ ಹೂಗಳಿಂದ ಕಿತ್ತಲ್ಪಟ್ಟು ಅರಿಸ ತೆಗೆಯಲ್ಪಟ್ಟಿದಾಗಿದೆ. ಇದರಲ್ಲಿ ಏನೆಂದು ಆಕ್ಷೇಪಣೀಯ ಪದಾರ್ಥವೂ ಸೇರಿಲ್ಲ ಮತ್ತು ಧಾರ್ಮಿಕವಾಗಿಯೂ ಪರಿಶುದ್ಧವಾದುದು. ದೇವಾಲಯಗಳಲ್ಲಿಯೂ ದೇವರ ಪೂಜೆಗೂ ಮಂತ್ರತಂತ್ರ ಸಮಾರಂಭಗಳಲ್ಲಿಯೂ [illegible] ದ್ದಾಗಿದೆ. ಎಂದು ಶಿಫಾರಸ್ ಮಾಡಲ್ಪಟ್ಟಿದೆ

ವಲ್ಲಭದಾಸ್ ತೇಜ್ಪಾಲ್

(ಹಿಂಗು. ಕೇಸರಿ ಮತ್ತು ಕಿರಾಣ ವ್ಯಾಪಾರಿಗಳು)

ಗೋವಿಂದಪ್ಪ ನಾಯಕ್ ರಸ್ತೆ, ಜಿ. ಟಿ. ಮದರಾಸು